# ಪ್ರಥಮ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ –2022–23

## ಮಾದರಿ ಉತ್ತರ ಪತ್ರಿಕೆ

**(ಕಲಿಕಾ ಫಲ ಆಧಾರಿತ)**

**8ನೇ ತರಗತಿ – ಕನ್ನಡ**

**ಗರಿಷ್ಠ ಅಂಕ : 30** **ಅವಧಿ: 1 ಗಂಟೆ 30 ನಿಮಿಷ**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.**

**1. ವ, ಟ, ಬ, ಅ, ಚ, ಔ, ಶ, ಯ, ಋ, ಠ – ಇವುಗಳಲ್ಲಿರುವ ಸ್ವರಾಕ್ಷರಗಳು ;** **1*4=4**

(ಎ) ಅ, ಔ, ಋ (ಬಿ) ವ, ಟ, ಬ, ಚ, ಠ

(ಸಿ) ಯ, ಶ (ಡಿ) ಯ, ಶ, ವ, ಟ, ಬ, ಚ, ಠ

**ಉತ್ತರ : (ಎ) ಅ, ಔ, ಋ**

**2. ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ ;**

(ಎ) ಅರ್ಧವಿರಾಮ ಚಿಹ್ನೆ (ಬಿ) ವಾಕ್ಯವೇಷ್ಟನ ಚಿಹ್ನೆ

(ಸಿ) ಅಲ್ಪವಿರಾಮ ಚಿಹ್ನೆ (ಡಿ) ಉದ್ಧರಣ ಚಿಹ್ನೆ

**ಉತ್ತರ : (ಡಿ) ಉದ್ಧರಣ ಚಿಹ್ನೆ**

**3. ಕರ – ಈ ಪದದ ನಾನಾರ್ಥಕ ಪದಗಳು ;**

(ಎ) ಕರಿ – ಕೈ (ಬಿ) ಕೈ – ಮೊಸಳೆ

(ಸಿ) ಕೈ – ಕಂದಾಯ (ಡಿ) ಕಾಲು – ಕೈ

**ಉತ್ತರ : (ಸಿ) ಕೈ – ಕಂದಾಯ**

**4. ಈ ಕೆಳಗಿನವುಗಳಲ್ಲಿ ಸರಿಯಾದ ಅಕಾರಾದಿ ರೂಪ ;**

(ಎ) ಚಪ, ಕೇಶವ, ಈಶ, ಕೇಶರಾಶಿ, ಢಾಳ, ಋಷಿ (ಬಿ) ಕೇಶವ, ಕೇಶರಾಶಿ, ಚಪ, ಢಾಳ, ಈಶ, ಋಷಿ

(ಸಿ) ಈಶ, ಋಷಿ, ಕೇಶರಾಶಿ, ಕೇಶವ, ಚಪ, ಢಾಳ (ಡಿ) ಈಶ, ಋಷಿ, ಕೇಶವ, ಕೇಶರಾಶಿ, ಚಪ, ಢಾಳ

**ಉತ್ತರ : (ಸಿ) ಈಶ, ಋಷಿ, ಕೇಶರಾಶಿ, ಕೇಶವ, ಚಪ, ಢಾಳ**

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **1*2=2**

5. ಹೊಟ್ಟೆಗೆ ಹಾಕು : ಕ್ಷಮಿಸು : : ಕೈಕೊಡು : **ಮೋಸಮಾಡು**

6. ಅಕ್ಷಿ : ಕಣ್ಣು : : ಉದರ : **ಹೊಟ್ಟೆ**

**III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ** **1*5=5**

7. ಈರುಳ್ಳಿ ಮತ್ತು ಮೂಲಂಗಿಯ ಬಗ್ಗೆ ಇರುವ ಒಗಟುಗಳನ್ನು ಬರೆಯಿರಿ.

**ಉತ್ತರ :** ಅಂಗಡಿಯಿಂದ ತರೋದು ಮುಂದಿಟ್ಟುಕೊಂಡು ಅಳೋದು – ಈರುಳ್ಳಿ

ಬಿಳಿ ಕುದುರೆಗೆ ಹಸಿರು ಬಾಲ – ಮೂಲಂಗಿ

8. ಕಾನನ, ಕೋಗಿಲೆ, ಮಲ್ಲಿಗೆ, ಭ್ರಮರ – ಈ ಪದಗಳನ್ನು ಬಳಸಿಕೊಂಡು ಸ್ವಂತ ವಾಕ್ಯ ರಚಿಸಿರಿ.

**ಉತ್ತರ :** ಕಾನನ : ಕಾನನದಲ್ಲಿ ಹುಲಿ, ಚಿರತೆಗಳನ್ನು ನೋಡಿದೆವು.

ಕೋಗಿಲೆ : ಕೋಗಿಲೆಯು ಕೂಹು ಕೂಹು ಎಂದು ಕೂಗುತ್ತದೆ.

ಮಲ್ಲಿಗೆ : ಮಲ್ಲಿಗೆ ಹೂವು ಘಮ ಘಮ ಎಂದು ವಾಸನೆ ಸೂಸುತ್ತದೆ.

ಭ್ರಮರ : ಭ್ರಮರಗಳು ಹೂವಿಂದ ಹೂವಿಗೆ ಹಾರುತ್ತವೆ.

9. ಖಾರ ಮತ್ತು ಸಿಹಿ ರುಚಿ ಹೊಂದಿರುವ ಯಾವುದಾದರೂ ಎರಡೆರಡು ಪದಾರ್ಥಗಳನ್ನು ಹೆಸರಿಸಿ.

**ಉತ್ತರ :** ಖಾರ : ಮೆಣಸಿನಕಾಯಿ, ಮೆಣಸು.

ಸಿಹಿ : ಕೇಸರಿಬಾತ್, ಲಾಡು.

10. ಸಾಹಿತ್ಯದ ಯಾವುದಾದರೂ ನಾಲ್ಕು ಪ್ರಕಾರಗಳನ್ನು ಹೆಸರಿಸಿ.

**ಉತ್ತರ :** ಕಥೆ, ಕವನ, ಕಾದಂಬರಿ, ನಾಟಕ.

11. ಉಪ್ಪು, ಕುಡಿ, ತಾಯಿ, ಬಂಧು, ನೀರು, ತಿಂದ, ರುಚಿ– ಈ ಶಬ್ದಗಳನ್ನು ಬಳಸಿಕೊಂಡು ಎರಡು ಗಾದೆ ಮಾತುಗಳನ್ನು ರಚಿಸಿರಿ.

**ಉತ್ತರ :** ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ.

ಉಪ್ಪು ತಿಂದವನು ನೀರು ಕುಡಿಯಲೇ ಬೇಕು.

**IV. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ** **2*2=4**

12. ವೈದ್ಯರಿಂದ ಸೂಜಿ ಚುಚ್ಚಿಸಿಕೊಳ್ಳುವಾಗ ಆಗುವ ನಿಮ್ಮ ಅನುಭವಗಳನ್ನು ಬರೆಯಿರಿ.

**ಉತ್ತರ :** ಅನಾರೋಗ್ಯವಾದಾಗ ವೈದ್ಯರು ಸೂಜಿಯನ್ನು ಚುಚ್ಚುಲು ಬಂದಾಗ ಒಂದು ರೀತಿಯಲ್ಲಿ ಭಯವಾಗುತ್ತದೆ. ನರಗಳನ್ನು ಬಿಗಿ ಹಿಡಿದುಕೊಳ್ಳುತ್ತೇವೆ. ಸೂಜಿ ಚುಚ್ಚಿದ ಜಾಗದಲ್ಲಿ ಗಾಯವಾಗುತ್ತದೆ, ರಕ್ತ ಬರುತ್ತದೆ ಎಂದು ಅಳು ಬರುತ್ತದೆ. ಸೂಜಿ ಚುಚ್ಚಲು ಬಂದಾಗ ವೈದ್ಯರಿಂದ ತಪ್ಪಿಸಿಕೊಳ್ಳಲು ಓಡಿ ಹೋಗಬೇಕೆನ್ನಿಸುತ್ತದೆ.

**13. ಈ ಕೆಳಗಿನ ಗದ್ಯಭಾಗಕ್ಕೆ ಸೂಕ್ತವಾದ ಲೇಖನ ಚಿಹ್ನೆ ಬಳಸಿ ಬರೆಯಿರಿ.**

**ಉತ್ತರ :** ಒಂದು ಸಲ ವಿಧಾನಸೌಧದ ಬಳಿ ಆಟೋಗಾಗಿ ಪರದಾಡುತ್ತಿದ್ದೆ(.) ದೂರದಲ್ಲಿ ಹೋಗುತ್ತಿದ್ದ ಒಬ್ಬ ಆಟೋ ಚಾಲಕರು ನಾನಿದ್ದ ಕಡೆ ಬಂದರು(.) (") ಏನ್‌ಸಾರ್ (?) ನೀವು ನರಸಿಂಹಯ್ಯನವರಲ್ಲವೆ (?) ಆಟೋ ಬೇಕೇ (?) ಎಲ್ಲಿಗೆ ಹೋಗಬೇಕು (?) (") ಎಂದು ತುಂಬಾ ವಿಶ್ವಾಸದಿಂದ ಕೇಳಿದರು(.) ನನಗಂತೂ ಪರಮಾಶ್ಚರ್ಯವಾಯಿತು(.)

**V. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **3*1=3**

**14. ಸತತ ಪ್ರಯತ್ನವೇ ಯಶಸ್ಸಿಗೆ ದಾರಿ**

**ಉತ್ತರ :** ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **"ಸತತ ಪ್ರಯತ್ನವೇ ಯಶಸ್ಸಿಗೆ ದಾರಿ"** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ಜೀವನದಲ್ಲಿ ಯಶಸ್ಸನ್ನು ಸಾಧಿಸಲು, ಸತತ ಪ್ರಯತ್ನ ನಮ್ಮದಾದಾಗ ಮಾತ್ರ ಯಶಸ್ಸು ನಮ್ಮನ್ನು ಬೆನ್ಹತ್ತಿಕೊಂಡು ಬರುತ್ತದೆ. ಪ್ರತಿಯೊಬ್ಬರಿಗೂ ಜೀವನದಲ್ಲಿ ಯಶಸ್ಸು ಗಳಿಸಬೇಕು ಎಂಬ ಆಸೆ ಇರುತ್ತದೆ. ಈ ಯಶಸ್ಸು ಗಳಿಸಲು ಶ್ರದ್ಧೆ, ಆಸಕ್ತಿ, ಕಠಿಣ ಪರಿಶ್ರಮಗಳೊಂದಿಗೆ ಸತತ ಪ್ರಯತ್ನ ಎನ್ನುವಂತಹದ್ದು ಬಹಳ ಮುಖ್ಯವಾಗುತ್ತದೆ. ಹಿಡಿದ ಕಾರ್ಯದಲ್ಲಿ ವಿಫಲರಾದಾಗ ಅದನ್ನು ಅಷ್ಟಕ್ಕೆ ಬಿಡದೆ, ಮತ್ತೆ ಮತ್ತೆ ಸತತವಾಗಿ ಪ್ರಯತ್ನ ಮಾಡಿದ್ದೇ ಆದರೆ ಒಂದಲ್ಲ ಒಂದು ಸಲ ಪ್ರತಿಫಲ ನೀಡುತ್ತದೆ. ಪ್ರಯತ್ನಕ್ಕೆ ತಕ್ಕ ಪ್ರತಿಫಲ ಯಾವಾಗಲೂ ಇದ್ದೇ ಇರುತ್ತದೆ. ಸಾಧನೆ, ಯಶಸ್ಸಿನ ಹಿಂದೆ ಸತತ ಪ್ರಯತ್ನ ಇದ್ದೇ ಇರುತ್ತದೆ. ನಿರಂತರ ಪ್ರಯತ್ನದಿಂದ ಯಶಸ್ಸಿನ ಮೆಟ್ಟಿಲನ್ನ ಹತ್ತಬಹುದು. ಸಾಧನೆಯ ಶಿಖರವನ್ನು ಮುಟ್ಟಬಹುದು. ಕೇವಲ ಮಾತಿನಲ್ಲಿ ಹೇಳುತ್ತ, ಮನಸ್ಸಿನಲ್ಲಿ ಮಂಡಿಗೆಯನ್ನು ತಿನ್ನುತ್ತ ಕೂತರೆ ಯಶಸ್ಸು ಮರಿಚಿಕೆಯಾಗಬಹುದು. ಆದ್ದರಿಂದ ಪ್ರಯತ್ನ ಮಾಡಬೇಕು. ನಿರಂತರ ಪ್ರಯತ್ನ ಯಶಸ್ಸಿನ ದಾರಿಯನ್ನು ತೋರಿಸುತ್ತದೆ, ಅಲ್ಲದೇ ಯಶಸ್ಸಿನ ಮೆಟ್ಟಿಲನ್ನು ಕೂಡ ಹತ್ತಿಸುತ್ತದೆ.

ಅಥವಾ

**ದೇಶ ಸುತ್ತು ಕೋಶ ಓದು**

**ಉತ್ತರ :** ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **"ದೇಶ ಸುತ್ತಿ ನೋಡು ಕೋಶ ಓದಿ ನೋಡು"** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ನಾವು ಜ್ಞಾನವನ್ನು ಸಂಪಾದನೆ ಮಾಡಿಕೊಳ್ಳಬೇಕಾದರೆ ದೇಶದ ವಿವಿಧ ಮಹತ್ವದ ಸ್ಥಳಗಳಿಗೆ ನೇರವಾಗಿ ಭೇಟಿ ನೀಡಿ ಪಡೆದುಕೊಳ್ಳಬಹುದು. ಅದೇ ರೀತಿಯಾಗಿ ಕೋಶಗಳನ್ನು ಅಂದರೆ ವಿವಿಧ ಪುಸ್ತಕಗಳನ್ನು ಓದಿ ಕೂಡ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದು. ಕೆಲವೊಂದು ವಿಷಯಗಳನ್ನು ಕೇವಲ ಓದುವುದರಿಂದ ಆಸ್ವಾಧಿಸಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ನೇರವಾಗಿ ವಿಷಯಗಳಿರುವ ಸ್ಥಳಕ್ಕೆ ಹೋಗಿ ತಿಳಿಯಬಹುದಾಗಿದೆ. ಜೇನು ಸವಿದರೆ ಮಾತ್ರ ಅದರ ಸಿಹಿ ಗುಣ ಗೊತ್ತಾಗುತ್ತದೆ. ಅದಕ್ಕಾಗಿ ಜ್ಞಾನ ಸಂಪಾದಿಸಲು ವಿದ್ಯಾರ್ಥಿಗಳಿಗೆ ಪ್ರವಾಸಗಳನ್ನು ಏರ್ಪಡಿಸಲಾಗುತ್ತದೆ. ಉದ್ದೇಶಪೂರ್ವಕವಾಗಿ ದೇಶವನ್ನು ಸುತ್ತುವುದರಿಂದ ಜ್ಞಾನವಿಕಾಸದ ಅನುಭವವಾಗುತ್ತದೆ. ಅದೇ ರೀತಿ ನಮ್ಮವರು ತಾವು ಕಂಡ ಅನುಭವಗಳನ್ನೊಳಗೊಂಡ ಸಾಹಿತ್ಯವನ್ನು ಬರೆದುಕೊಟ್ಟು ಹೋಗಿದ್ದಾರೆ. ಅಂತಹ ಸಾಹಿತ್ಯವನ್ನು ಓದುವುದರಿಂದಲೂ ಜ್ಞಾನವನ್ನು ಪಡೆದು ಕೊಳ್ಳಬಹುದು. ಒಟ್ಟಿನಲ್ಲಿ ಜ್ಞಾನವಿಕಾಸಕ್ಕಾಗಿ ದೇಶದ ವಿವಿಧ ಸ್ಥಳಗಳಿಗೆ ಹೋಗಬಹುದು, ಇಲ್ಲವೇ ವಿವಿಧ ಕೋಶಗಳನ್ನು ಓದಬೇಕು.

**VI. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **4*1=4**

15. **ಅರಳಿ ಮಲ್ಲಿಗೆ** ಮೊಗ್ಗು ಸುತ್ತ ಗಂಧವ ಚೆಲ್ಲಿ
ವಸಂತನಾಗಮನ ಸಾರಿದಾಗ
ಮಾಮರದ ರೆಂಬೆಯಲಿ ಕುಳಿತಿದ್ದ ಕೋಗಿಲೆಯು
ಬೆರೆಸಿತದರೊಳಗೊಂದು **ಕುಕಿಲರಾಗ**

**ಅಥವಾ**

**ಬಳುಕಾಡಿ** ಮಲ್ಲಿಗೆಯು ಕೋಗಿಲೆಯ ಕರೆದಿತ್ತು;
ಪ್ರಿಯ ಗೆಳತಿ ಹಾಡೊಂದ ಹಾಡೇ
ಬಾನಸಂಚಾರಿಣಿಯೆ ಅನುಭವದ ಹೊನ್ನಗಣಿಯೆ
**ಲೋಕವಾರ್ತೆಯದೇನು ಅರುಹೆ**

**VII. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **4*1=4**

16. **ಅನುಕರಣಾವ್ಯಯ, ಜೋಡುನುಡಿ, ದ್ವಿರುಕ್ತಿ, ರುಚಿಯ ಅನುಭವ, ಪ್ರಾಣಿ, ಪಕ್ಷಿ ಧ್ವನಿ, ವಾಹನಗಳ ಸದ್ದು, – ಇವುಗಳನ್ನೊಳಗೊಂಡಂತೆ ಪ್ರವಾಸದ ಒಂದು ಅನುಭವವನ್ನು ಬರೆಯಿರಿ.**

**ಉತ್ತರ :** ಈ ವರ್ಷ ನಮ್ಮ ಶಾಲೆಯಿಂದ ಮೈಸೂರಿಗೆ ಬಸ್ಸಿನಲ್ಲಿ ಪ್ರವಾಸ ಹೋಗಿದ್ದೇವು. ಶಾಲೆಯಿಂದ ಹೊರಟಾಗ ರಾತ್ರಿ ಹತ್ತು ಗಂಟೆಯಾಗಿತ್ತು. ನಾನು ಮನೆಯಿಂದ ಬರುವುದು ಸ್ವಲ್ಪ ತಡವಾಗಿದ್ದರಿಂದ **ಓಡೋಡಿ** ಬಂದು ಬಸ್ಸು ಹತ್ತಿದೆನು. ಬಸ್ಸಿನಲ್ಲಿ ಹೋಗುವಾಗ ಅದು ಆಗಾಗ ಮಾಡುತ್ತಿದ್ದ **ಪಂವ್ ಪಂವ್** ಸದ್ದು ನನ್ನನ್ನು ನಿದ್ರೆ ಮಾಡಲು ಬಿಡಲಿಲ್ಲ. ಬೆಳಿಗ್ಗೆ ಬಸ್ಸು ಸುಮಾರು **ಆರೇಳು** ಗಂಟೆಗೆ ಮೈಸೂರನ್ನು ತಲುಪಿ **ಬುಸ್ ಬುಸ್** ಎಂದು ಏದುಸಿರು ಬಿಡುತ್ತ ನಿಂತಿತು. ನಿಗದಿಪಡಿಸಿದ್ದ ಕೊಠಡಿಗೆ ಹೋಗಿ ಬೆಳಗಿನ ನಿತ್ಯ ಕರ್ಮಗಳನ್ನು ಮುಗಿಸಿಕೊಂಡು ಉಪ ಆಹಾರ ಸೇವಿಸಲು ಹೋಟೆಲ್‌ಗೆ ಹೋದೆವು. ಅವರವರಿಗೆ ಬೇಕಾದ ಉಪ ಆಹಾರಗಳನ್ನು ತರಿಸಿಕೊಂಡರು. ನಾನು ಉಪ್ಪಿಟ್ಟು ಮತ್ತು ಕೇಸರಿಬಾತ್‌ನ್ನು ತಿಂದೆ. ಉಪ್ಪಿಟ್ಟು **ಖಾರ ಖಾರ**ವಾಗಿ ಬಹಳ ರುಚಿಯಾಗಿತ್ತು. ಅದರ ಜೊತೆಯಲ್ಲಿದ್ದ ಕೇಸರಿಬಾತಂತು **ಸಿಹಿ ಸಿಹಿ**ಯಾಗಿ ನಾಲಿಗೆ ರುಚಿಯನ್ನು ನೀಡಿತು.

ತದನಂತರ ಅರಮನೆ ನೋಡಲು ಹೋದೆವು. ದಾರಿಯ **ಅಕ್ಕಪಕ್ಕ** ಅಂಗಡಿಗಳಲ್ಲಿ **ಆಟಪಾಠ**ದ ಸಾಮಾನುಗಳೇ ಹೆಚ್ಚು. ಅರಮನೆ ನೋಡಲು ತುಂಬಾ ಸುಂದರವಾಗಿತ್ತು. ಅರಮನೆಯ ಒಳಗಿದ್ದ ಚಿನ್ನದ ಅಂಬಾರಿಯಂತು **ಫಳ ಫಳ** ಅಂತ ಹೊಳೆಯುತ್ತಿತ್ತು. ಅರಮನೆಯನ್ನು ನೋಡಿಕೊಂಡು, ನಂತರ ನನ್ನ ನೆಚ್ಚಿನ ಮೃಗಾಲಯಕ್ಕೆ ಹೊದೇವು. ಅಲ್ಲಿದ್ದ ಹಲವು ಪ್ರಾಣಿ, ಪಕ್ಷಿಗಳನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು. ಬಲೆಯಲ್ಲಿದ್ದ ಕೋಗಿಲೆಯ **ಕೂಹು ಕೂಹು** ಧ್ವನಿ ಮಾಡಿದ್ದು, ನನಗೆ ವಸಂತ ಕಾಲವನ್ನು ನೆನಪಿಸಿತು. ಗುಬ್ಬಚ್ಚಿಯ **ಚಿಂವ್ ಚಿಂವ್** ಧ್ವನಿ ನಮ್ಮ ಮನೆಯ ಹಿತ್ತಲಿನಲ್ಲಿರುವ ಗೂಡನ್ನು ನೆನಪಿಸಿತು. ಅಬ್ಬಾ! ಮುಂದೆ ಸಿಂಹ, ಹುಲಿಗಳ ಆರ್ಭಟವನ್ನು ನೋಡಿ ನನಗೆ ಭಯವಾಗಿಬಿಟ್ಟಿತ್ತು. ಅಲ್ಲಿದ್ದ **ಕರಿನರೆ** ಬಣ್ಣದ ಪಟ್ಟೆಯನ್ನು ಹೊಂದಿದ್ದ ಝೀಬ್ರಾವೊಂದು ಓಡಿ ಹೋಗುತ್ತಿತ್ತು. ಆ ಮೃಗಾಲಯವನ್ನು ನೋಡುತ್ತ ನೋಡುತ್ತ **ಕಾಡುಮೇಡಿ**ನಲ್ಲಿ ಅಲೆದಂತಾಯಿತು. ಮೃಗಾಲಯದಿಂದ ಹೊರಬಂದಾಗ ಸಾಯಾಂಕಾಲ ಐದು ಗಂಟೆಯಾಗಿತ್ತು. **ಬಿಸಿಬಿಸಿ**ಯಾದ ಚಾಹ ಸೇವಿಸಿ ಚಾಮುಂಡಿ ಬೆಟ್ಟಕ್ಕೆ ಹೋದೆವು.

**ಅಥವಾ**

**ಗಾದೆ ಮಾತುಗಳು, ನುಡಿಗಟ್ಟುಗಳು ಮತ್ತು ಪ್ರಾಸ ಪದಗಳನ್ನು ಬಳಸಿಕೊಂಡು ಕಥೆಯೊಂದನ್ನು ರಚಿಸಿ.**

**ಉತ್ತರ :** ಅದೊಂದು ದೊಡ್ಡ ಕಾಡು. ಒಂದು ಮುಂಜಾನೆ ಸಿಂಹ ಮತ್ತು ನರಿ ವಾಕಿಂಗ್ ಹೊರಟಿದ್ದವು. ಅವೆರಡೂ ಮಾತನಾಡುತ್ತಾ **ಸುತ್ತ–ಮುತ್ತ** ನೋಡುತ್ತಾ ಹೋಗುವಾಗ ಏನೋ ಜಗಳ ಶುರುವಾಯಿತು. ನರಿ ಬುದ್ಧಿವಂತ **ಊಟ ಬಲ್ಲವನಿಗೆ ರೋಗವಿಲ್ಲ; ಮಾತು ಬಲ್ಲವನಿಗೆ ಜಗಳವಿಲ್ಲ** ಎಂಬ ಮಾತಿನಂತೆ ತಾನು ಮಾತನಾಡುವುದನ್ನು ನಿಲ್ಲಿಸಿ ಅಲ್ಲಿಂದ ತನ್ನ ಗುಹೆಗೆ ಹೊರಟಿತು. ನರಿಯ ಕೋಪ ತಣ್ಣಗಾಗಲಿಲ್ಲ. ಅದು ಸಿಂಹದ ಮೇಲೆ **ಕತ್ತಿಮಸೆ**ಯುತ್ತಲೇ ಇತ್ತು. ಕೊನೆಗೆ **ಶಕ್ತಿಗಿಂತ ಯುಕ್ತಿ ಮೇಲು** ಎಂಬ ಮಾತಿನಂತೆ ಸಿಂಹಕ್ಕೆ ತಕ್ಕ ಪಾಠ ಕಲಿಸಲು ನಿರ್ಧರಿಸಿತು. ತನ್ನ ಮುತ್ತಜ್ಜಿ ಯಾವಾಗಲೂ ಹೇಳುತ್ತಿದ್ದ **ಉಪಾಯ ಬಲ್ಲವನಿಗೆ ಅಪಾಯವಿಲ್ಲ** ಎಂಬ ಮಾತು ನೆನಪಿಗೆ ಬಂದು ಅದಕ್ಕೆ ತಕ್ಕಂತೆ ಒಂದು ಉಪಾಯವನ್ನೂ ಮಾಡಿತು. ಸಿಂಹವನ್ನು ಮತ್ತೊಮ್ಮೆ ಕಾಣಲು **ಹೊಂಚು ಹಾಕು**ತ್ತಿತ್ತು. ಹೀಗಿರಲು ಒಂದು ದಿನ ಸಿಂಹ ಭೇಟೆಯಾಡಿಕೊಂಡು ಹಿಂತಿರುಗಿ ಬರುವಾಗ ತಡರಾತ್ರಿಯಾಗಿಬಿಟ್ಟಿತು. ಸಿಂಹಕ್ಕೆ ವಯಸ್ಸಾಗಿದ್ದರಿಂದ ಸರಿಯಾಗಿ ಕಣ್ಣು ಕಾಣಿಸುತ್ತಿರಲಿಲ್ಲ. ತಾನು ತನ್ನ ಪ್ರಯಾಣವನ್ನು ಅಲ್ಲಿಗೆ ನಿಲ್ಲಿಸಿ ಯಾವುದಾದರೂ ಗುಹೆಯಲ್ಲಿ ವಿಶ್ರಾಂತಿ ಪಡೆಯಬೇಕೆಂದು ಸುತ್ತಲೂ ನೋಡಿತು. ತುಸು ದೂರದಲ್ಲಿ ಗುಹೆಯೊಂದು ಕಂಡಿತು. ಕೂಡಲೇ ಸಿಂಹ ಅತ್ತ ನಡೆದು, ಒಳಗಿರುವವರನ್ನು ಕೂಗಿತು. ನೋಡಿದರೆ ಒಳಗೆ ನರಿ!. ಆದರೆ ಸಿಂಹಕ್ಕೆ ನರಿಯ ಗುರುತು ಸಿಗಲಿಲ್ಲ. ಸಿಂಹವನ್ನು ಕಂಡ ನರಿಗೆ **ಕಣ್ಣು ಕೆಂಪಾಯಿತು.** ತನ್ನ ಶತೃ ತನ್ನ ಮನೆಗೆ ಬಂದಿರುವುದನ್ನು ಕಂಡು ಕುಣಿದಾಡಿತು. ಮೆಲ್ಲನೆ ಉಪಾಯದಿಂದ ಸಿಂಹವನ್ನು ಒಳಗೆ ಕರೆಯಿತು. ಸಿಂಹ ಒಳಗೆ ಬಂದದ್ದೇ ತಡ, ಭಯಂಕರ ಪ್ರಾಣಿಯ ವೇಷದಾರಿ ನರಿ ಆರ್ಭಟಿಸಿತು. ಅದನ್ನು ನೋಡಿ ಸಿಂಹ ಅಲ್ಲಿಂದ **ಕಾಲು ಕಿತ್ತಿತು.**

**VIII. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

**17. ಅ) ನಾಯಿಯು ಮಾಲಾಳಿಗೆ ಏಕೆ ಕೃತಜ್ಞತೆಯನ್ನು ಸಲ್ಲಿಸಿತು?**

**ಉತ್ತರ :** ಮಾಲಾ ಒಂದು ದಿನ ಶಾಲೆಗೆ ಕಾಲುದಾರಿಯಿಂದ ಹೋಗುತ್ತಿದ್ದಾಗ ಆಕೆಗೆ ನಾಯಿಯೊಂದು ನೋವಿನಿಂದ ಅರಚುವ ಶಬ್ದ ಕೇಳಿ ಅತ್ತ ಹೋಗಿ ನೋಡಿದಳು. ಪಾಪ! ನಾಯಿಯ ಕಾಲಿಗೆ ಮುಳ್ಳೊಂದು ಚುಚ್ಚಿ ರಕ್ತ ಹರಿಯುತ್ತಿತ್ತು. ಅದು ನೋವಿನಿಂದ ನಡೆಯಲಾಗದೆ ಕಣ್ಣೀರು ಸುರಿಸುತ್ತ ಬೊಗಳುತ್ತಿತ್ತು. ಮಾಲಾ ಧೈರ್ಯ ಮಾಡಿ ನಾಯಿಯ ಹತ್ತಿರ ಹೋಗಿ ಅದರ ಕಾಲಿಗೆ ಚುಚ್ಚಿದ ಮುಳ್ಳನ್ನು ತೆಗೆದು ಅಲ್ಲೇ ಇದ್ದ ನೋವು ನಿವಾರಕ ಮರದ ಸೊಪ್ಪನ್ನು ಅರೆದು ಅದರ ರಸವನ್ನು ಗಾಯಕ್ಕೆ ಹಚ್ಚಿದಳು. ಆಗ ನಾಯಿಗೆ ನೋವಿನಿಂದ ಮುಕ್ತಿ ಸಿಕ್ಕಿತು. ಅದು ತನಗೆ ಚಿಕಿತ್ಸೆ ನೀಡಿದ ಮಾಲಾಳನ್ನು ನಾಲಿಗೆಯಿಂದ ನೆಕ್ಕಿ ಕೃತಜ್ಞತೆಯನ್ನು ಸಲ್ಲಿಸಿತು.

**ಆ) ಮಾಲಾಳು ನಾಯಿಗೆ ಏಕೆ ಕೃತಜ್ಞತೆಯನ್ನು ಸಲ್ಲಿಸಿದಳು?**

**ಉತ್ತರ :** ಮಾಲಾ ಶಾಲೆಯಿಂದ ಮನೆಗೆ ಕಾಲುದಾರಿಯಲ್ಲಿ ಬರುತ್ತಿರುವಾಗ ಅವಳಿಗೆದುರಾಗಿ ಹುಚ್ಚುನಾಯಿಯೊಂದು ಬಂತು. ಅದು ಮಾಲಾಳನ್ನು ನೋಡಿ ವಿಚಿತ್ರವಾಗಿ ಬೊಗಳುತ್ತಾ ಮಾಲಾಳ ಹತ್ತಿರ ಬಂದಾಗ ಮಾಲಾ ಭಯದಿಂದ ಜೋರಾಗಿ ಕಿರುಚಿದಳು. ಈ ಧ್ವನಿ ಅಲ್ಲೇ ಸಮೀಪದಲ್ಲೇ ಇದ್ದ ಮಾಲಾಳಿಂದ ಚಿಕಿತ್ಸೆ ಪಡೆದ ನಾಯಿಗೆ ಕೇಳಿಸಿತು. ಅದು ಕೋಪದಿಂದ ಬೊಗಳುತ್ತಾ ಬಂತು. ತನಗೆ ಸಹಾಯ ಮಾಡಿದವರನ್ನು ಹುಚ್ಚುನಾಯಿಯು ಭಯಗೊಳಿಸುತ್ತಿರುವುದನ್ನು ಕಂಡು ಕೋಪದಿಂದ ಆ ಹುಚ್ಚುನಾಯಿಯ ಮೇಲೆ ಹಾರಿ ಕಚ್ಚಲು ಶುರು ಮಾಡಿತು. ಇದರಿಂದ ಭಯಗೊಂಡ ಹುಚ್ಚುನಾಯಿಯು ಓಡಿ ಹೋಯಿತು. ತನ್ನನ್ನು ರಕ್ಷಿಸಿದ ನಾಯಿಗೆ ಮಾಲಾ ಕೃತಜ್ಞತೆಯನ್ನು ಸಲ್ಲಿಸಿದಳು.